(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು

ಶ್ರೀಮತಿ ಮೋಟಮ್ಮ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 20.7.01ರಂದು ತಡೆಹಿಡಿಯಲ್ಪಟ್ಟ 16ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 171 ಪ್ರಶ್ನೆಗಳ ಪೈಕಿ 151 ಉತ್ತರಗಳನ್ನು ಮತ್ತು ದಿನಾಂಕ 27.7.01ರ 21ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 150 ಪ್ರಶ್ನೆಗಳ ಪೈಕಿ 123 ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ 20.7.2001ರ ಚುಕ್ಕೆಗುರುತಿನ ಪ್ರಶ್ನೋತ್ತರಗಳು.

ನಗರ ಪ್ರದೇಶದ ವಸತಿ ಹೀನರಿಗೆ ಸೂರು ಕಲ್ಪಿಸುವ ಯೋಜನೆ.

226(2216)

ಶ್ರೀ ಯೋಗೀಶ್ ಭಟ್ ಎನ್.(ಮಂಗಳೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯಾದ್ಯಂತ ನಗರ ಪ್ರದೇಶದ ವಸತಿ ಹೀನರಿಗೆ ಸೂರು ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ?

ಆ. ಯೋಜನೆಯ ಸಂಪೂರ್ಣ ವಿವರಗಳನ್ನು ನೀಡುವುದು.

ಇ. ಈ ಯೋಜನೆಗೆ ಅಗತ್ಯವಿರುವ ಜಮೀನುಗಳನ್ನು ಸರ್ಕಾರ ವಶಪಡಿಸಿಕೊಂಡಿದೆಯೆ; ಇಲ್ಲದೇ ಇದ್ದಲ್ಲಿ ಯಾವಾಗ ವಶಪಡಿಸಿಕೊಳ್ಳಲಾಗುವುದು;

ಈ. ಸದರಿ ಯೋಜನೆಯು ಈಗ ಯಾವ ಹಂತದಲ್ಲಿದೆ; ಮತ್ತು ಎಂದಿನಿಂದ ಜಾರಿಗೆ ಬರುವುದು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ. ನಗರ ಪ್ರದೇಶದ ವಸತಿ ಹೀನರಿಗಾಗಿ ನಗರ ಆಶ್ರಯ ಯೋಜನೆ ಜಾರಿಯಲ್ಲಿದೆ.

ಆ. ಈ ಯೋಜನೆಯಡಿ ಫಲಾನುಭವಿಗಳು ವಸತಿಹೀನರಾಗಿದ್ದು. ವಾರ್ಷಿಕ ಆದಾಯ ರೂ. 11.800 ಗಳಿಗಿಂತ ಕಡಿಮೆ ಇರಬೇಕು. ಈ ಮನೆಗಳ ನಿರ್ಮಾಣ ವೆಚ್ಚ ರೂ. 30,000ಗಳಾಗಿದ್ದು, ಇದರಲ್ಲಿ ರೂ. 25.000ಗಳು ಹುಡ್ಕೋ ಸಂಸ್ಥೆಯಿಂದ ಸಾಲದ

ರೂಪದಲ್ಲೂ ಉಳಿದ ರೂ. 5.000ಗಳನ್ನು ಫಲಾನುಭವಿಗಳ ವಂತಿಕೆಯಾಗಿರುತ್ತದೆ.

ಇ. ಎಲ್ಲೆಲ್ಲಿ ಸರ್ಕಾರಿ ಜಮೀನು ಲಭ್ಯವಿದೆಯೋ ಆ ಜಮೀನನ್ನು ಆಶ್ರಯ ಯೋಜನೆಗೆ ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ. ಹಾಗೂ ಉಳಿದ ಜಾಗದಲ್ಲಿ ಖಾಸಗಿ ಜಮೀನನ್ನು ಮಾತುಕತೆಯ ಮುಖಾಂತರ ಮಾರ್ಗಸೂಚಿ ದರದ ಮೇಲೆ ಗರಿಷ್ಠ ಶೇ.20 ರಷ್ಟನ್ನು ಹೆಚ್ಚಿಗೆ ನೀಡಲು ಅವಕಾಶ ನೀಡಿ ಖರೀದಿಸಲು ಸರ್ಕಾರಿ ಆದೇಶ ಸಂಖ್ಯೆ:ವ�ಇ 74 ಹೆಚ್‌ಎಎಸ್ 2000 ದಿನಾಂಕ 15-9-2000ರಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದೆ.

ಈ. ಸದರಿ ಯೋಜನೆಯು ಪ್ರಸ್ತುತ ಜಾರಿಯಲ್ಲಿರುತ್ತದೆ.

ರಾಜ್ಯದಲ್ಲಿ ಶೀತಲ ಗೃಹಗಳ ನಿರ್ಮಾಣ.

227(2093)

ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಣ್ಣು-ಹಂಪಲು ಹಾಗೂ ಕಾಯಿಪಲ್ಯಗಳನ್ನು ಸಂಗ್ರಹಿಸಲು ರಾಜ್ಯದಲ್ಲಿ ಎಷ್ಟು ಶೀತಲಗೃಹಗಳು ಸರ್ಕಾರಿ, ಸಹಕಾರಿ ಮತ್ತು ಖಾಸಗಿ ವಲಯಗಳಲ್ಲಿ ಇರುತ್ತವೆ? (ಜಿಲ್ಲಾವಾರು ಮಾಹಿತಿ ನೀಡುವುದು)

2) ಬೆಳಗಾಂ ಜಿಲ್ಲೆಯಲ್ಲಿ ಹಣ್ಣು-ಹಂಪಲು ಹಾಗೂ ಕಾಯಿಪಲ್ಯಗಳನ್ನು ಸಂಗ್ರಹಿಸಿಡಲು ಎಷ್ಟು ಶೀತಲಗೃಹಗಳು ಇರುತ್ತವೆ. (ತಾಲ್ಲೂಕುವಾರು ವಿವರ ನೀಡುವುದು)

3) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ಕಾಯಿಪಲ್ಯ ಸಂಗ್ರಹಿಸಿಡಲು ಶೀತಲಗೃಹದ ಅವಶ್ಯಕತೆ ಇದ್ದು, ಅಲ್ಲಿ ಯೋಗ್ಯ ಸ್ಥಳವಿರುವುದರಿಂದ ಶೀತಲ ಗೃಹವನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

4) ರಾಜ್ಯದಲ್ಲಿ ಶೀತಲಗೃಹಗಳನ್ನು ಕಟ್ಟಲು ಯಾವ ಯಾವ ಸವಲತ್ತುಗಳನ್ನು ಕೊಡಲಾಗಿದೆ? (ವಿವರ ನೀಡುವುದು)

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು):

1) ರಾಜ್ಯದಲ್ಲಿ ಒಟ್ಟು 52 ಶೀತಲಗೃಹಗಳಿದ್ದು, ಅವುಗಳಲ್ಲಿ 2 ಸರ್ಕಾರಿ, 11 ಸಹಕಾರಿ ಹಾಗೂ 39 ಖಾಸಗಿ ವಲಯಗಳಲ್ಲಿ ಇರುತ್ತದೆ. (ಜಿಲ್ಲಾವಾರು ಮಾಹಿತಿ ಅನುಬಂಧ-1 ಮತ್ತು 2